ಕರ್ನಾಟಕ ವಿಧಾನ ಸಭೆ

328 ಶ್ರೀ. ಗೋಪಾಲ ಭಂಡಾರಿ. ಹೆಚ್.

ಕೃಷಿ ಸಚಿವರು

ಅ) ರೈತರಿಗೆ ಒದಗಿಸಲಾಗುವ ಕೃಷಿ ಯಂತ್ರೋಪಕರಣಕ್ಕೆ ಸಿಗಲಿರುವ ಸಹಾಯ ಧನವನ್ನು ನೇರವಾಗಿ ಅವರ ಖಾತೆಗೆ ಕಳುಹಿಸದೇ ಇರಲು ಕಾರಣವೇನು;

ರೈತರು ಯಂತ್ರೋಪಕರಣಗಳನ್ನು ಪೂರ್ತಿ ಹಣ ನೀಡಿ ಖರೀದಿಸಿದಲ್ಲಿ ಸಹಾಯಧನವನ್ನು ರೈತರಿಗೆ ನೇರವಾಗಿ ಅವರ ಖಾತೆಗೆ ನೀಡಲಾಗುತ್ತಿದೆ.

ಆ) ಯಂತ್ರೋಪಕರಣಗಳ ವಿತರಕರಿಗೆ ಸಹಾಯ ಧನವನ್ನು ನೇರವಾಗಿ ಬಿಡುಗಡೆ ಮಾಡಲಾಗುತ್ತಿದಿಯೇ; ನೇರವಾಗಿ ವಿತರಣೆಗಾರರಿಗೆ ಬಿಡುಗಡೆ ಮಾಡುವುದರಿಂದ ಭ್ರಷ್ಟಾಚಾರಕ್ಕೆ ಅವಕಾಶವಾಗುತ್ತಿಲ್ಲವೆ;

ಯಂತ್ರೋಪಕರಣಗಳ ವಿತರಕರಿಗೆ ರೈತರು, ರೈತರ ವಂತಿಕೆಯನ್ನು ಮಾತ್ರ ನೀಡಿದ್ದಲ್ಲಿ ಸಹಾಯಧನವನ್ನು ಯಂತ್ರೋಪಕರಣ ವಿತರಕರಿಗೆ ಬಿಡುಗಡೆ ಮಾಡಲಾಗುತ್ತಿದೆ. ರೈತರು ಪೂರ್ಣ ಮೊತ್ತವನ್ನು ನೀಡಿ ಸವಲತ್ತನ್ನು ಖರೀದಿಸಿದಲ್ಲಿ ಸಹಾಯಧನವನ್ನು ರೈತರಿಗೆ ನೇರವಾಗಿ ನೀಡಲಾಗುತ್ತಿದೆ. ರೈತರು ಸವಲತ್ತನ್ನು ಖರೀದಿಸಿ, ತೃಪ್ತಿಕರ ಪ್ರಮಾಣ ಪತ್ರ ನೀಡಿದ ನಂತರವೇ ಅಗತ್ಯ ದಾಖಲಾತಿಗಳನ್ನು ರೈತರಿಂದ ಹಾಗೂ ಸರಬರಾಜುದಾರರಿಂದ ಪಡೆದು ಕ್ಷೇತ್ರಮಟ್ಟದಲ್ಲಿ ಸರಬರಾಜಾದ ಸವಲತ್ತನ್ನು ಪರಿಶೀಲಿಸಿದ ನಂತರ ಸಹಾಯಧನವನ್ನು ಬಿಡುಗಡೆ ಮಾಡಲಾಗುವುದು.

ಕರ್ನಾಟಕ ವಿಧಾನ ಸಭೆ

329 ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಮಾನ್ಯ ಕೃಷಿ ಸಚಿವರು

ಅ) ಗುಲ್ಬರ್ಗಾ ಜಿಲ್ಲೆ ಸೇಡಂ ತಾಲ್ಲೂಕಿನ ಕೃಷಿ ಇಲಾಖೆಯ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ (1 ಸಹಾಯಕ ಕೃಷಿ ನಿರ್ದೇಶಕರು, 6 ಕೃಷಿ ಅಧಿಕಾರಿಗಳು, 2 ಹುದ್ದೆ ಸಹಾಯಕ ಕೃಷಿ ಅಧಿಕಾರಿ ಹಾಗೂ 9 ಹುದ್ದೆ ಕೃಷಿ ಸಹಾಯಕ) ಒಟ್ಟು 18 ಹುದ್ದೆಗಳು, ಖಾಲಿ ಇದ್ದು ರೈತರಿಗೆ ಕೃಷಿ ಇಲಾಖೆಯಿಂದ ಮಾಹಿತಿ ಪಡೆಯಲು ತೊಂದರೆ ಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಹೌದು.

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದ ಕ್ರಮವೇನು?